C.R.P.67

| Form No.4 (Civil) Deposition Sheets (R.P.No.57) |
|---|

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆಃ 101-2023 ( ಸಿ/ಡಬ್ಲೂ ಎಸ್ಸಿ 113-2023)**

ಪ್ರಾಸಾ. 33 ಚಾಸಾ. 42

ಸಾಕ್ಷಿದಾರರ ಹೆಸರು : ವಿಜಯ್ ಕುಮಾರ್

ತಂದೆಯ ಹೆಸರು : ಎನ್. ಯಲ್ಲಪ್ಪ

ವಯಸ್ಸು : 39 ವರ್ಷಗಳು

ಉದ್ಯೋಗ : ಖಾಸಗಿ ನೌಕರ

ವಾಸ : ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ 23-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಾನು ಮೊದಲು ಬೆಂಗಳೂರಿನ ವೈ.ಎಸ್. ಎಂಟರ್ ಪ್ರೈಸಸ್ ನಲ್ಲಿ ಇನ್ ಚಾರ್ಜ್ ಆಗಿ ಕೆಲಸ ಮಾಡುತ್ತಿದ್ದೆ. ಸದರಿ ಕಂಪನಿಯು ವಾಹನಗಳ ಫೈನಾನ್ಸ್ ಕಂಪನಿ ಆಗಿತ್ತು. ಚಾಸಾ-31 ಆಟೋ ಲೋನ್ ತೆಗೆದುಕೊಂಡಿದ್ದರು, ಅವರು ಲೋನ್ ಮರುಪಾವತಿ ಮಾಡಿರಲಿಲ್ಲ. ಸದರಿ ಆಟೋ ನೋಡಿದರೆ ಗುರುತಿಸುತ್ತೇನೆ. ನಿ.ಪಿ. 33, 1 , 2 ರಲ್ಲಿ ಕಾಣುವ ಆಟೋ ಸೀಜ್ ಆಗಿತ್ತು. ನಂತರ ಅರವಿಂದ್ ಎಂಬುವವರು ಅದನ್ನು 2022 ರಲ್ಲಿ ಖರೀದಿ ಮಾಡಿದ್ದರು. ನ್ಯಾಯಾಲದಲ್ಲಿರುವ ಆರೋಪಿಗಳಲ್ಲಿ ಅರವಿಂದ್ ಎಂಬುವವರು ಇಲ್ಲ. ನನಗೆ ಅರವಿಂದ್ ಎಂಬುವವರನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ನಂತರ ಪೊಲೀಸ್ ಠಾಣೆಯಿಂದ ಪೋನ್ ಬಂದಿತು , ಸದರಿ ಆಟೋ ಆರ್. ಸಿ ಟ್ರಾನ್ಸ್ಫರ್ ಆಗಿರಲಿಲ್ಲ, ಅದು ಚಾಸಾ-31 ರವರ ಹೆಸರಿನಲ್ಲಿ ಇತ್ತು. ಯಾವ ಕಾರಣಕ್ಕಾಗಿ ಪೊಲೀಸರು ಸದರಿ ಆಟೋವನ್ನು ವಶಪಡಿಸಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ದಾಖಲೆಗಳನ್ನು ನಾನು ತನಿಖಾಧಿಕಾರಿಗೆ ಕೊಟ್ಟಿದ್ದೇನೆ. ಸಾಕ್ಷಿಯು ಗುರುತಿಸಿದ ಡೆಲಿವರಿ ನೋಟ್ , ರಿಜಿಸ್ಟ್ರೇಷನ್ ಕಾರ್ಡ್ , ಇನ್ಸೂರೆನ್ಸ್ ಮತ್ತು ಎನ್. ಓ. ಸಿ ಗಳ ನಕಲುಗಳನ್ನು

ಕ್ರಮವಾಗಿ ನಿ.ಪಿ 72 ರಿಂದ 75 ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಸಹಿಗಳನ್ನು ನಿ.ಪಿ. 72(ಎ) ರಿಂದ 75(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ.

<u>ಪಾಟೀ ಸವಾಲು: ಆರೋಪಿ-1 ರಿಂದ 7 ನೇ ಪರ ವಕೀಲರಿಂದ</u>

ವೈ.ಎಸ್. ಎಂಟರ್ ಪ್ರೈಸಸ್ ನಲ್ಲಿ ಕೆಲಸ ಮಾಡಿದ ಬಗ್ಗೆ ನಾನು ದಾಖಲಾತಿ ನೀಡಿರುವುದಿಲ್ಲ. ವಾಹನ ಖರೀದಿ ಮಾಡಿದ ವ್ಯಕ್ತಿಯ ಹೆಸರಿನಲ್ಲಿ ಆರ್.ಸಿ ಇರುತ್ತದೆ ಎಂದರೆ ಸರಿ . ನಿ.ಪಿ 72 ಡೆಲಿವರಿ ನೋಟ್ ಅನ್ನು ಪೊಲೀಸರ ಕೋರಿಕೆ ಮೇರೆಗೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರ್.ಸಿ ದಾಖಲೆಯಲ್ಲಿ ಚಾಸಾ-31 ರ ಹೆಸರು ಇದೆ ಎನ್ನುವುದು ನಿಜ. ಅರವಿಂದ್ ರವರು ನಮ್ಮ ಕಂಪನಿಯಿಂದ ಯಾವುದೇ ವಾಹನ ಖರೀದಿ ಮಾಡಿಲ್ಲ ಎನ್ನುವುದು ಸುಳ್ಳು. ಪೋಲಿಸರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

( 8 ನೇ ಆರೋಪಿ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.)

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.